418/14

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು-560003

## KARNATAKA SECONDARY EDUCATION EXAMINATION BOARD MALLESHWARAM, BENGALURU-560003

ಕೆ.ಓ.ಎಸ್. ಪರೀಕ್ಷೆ ಜುಲೈ -2021

## KOS EXAMINATION JULY-2021

| | | |
|---|---|---|
| Subject / ವಿಷಯ | : | Social Science<br>ಸಮಾಜ ವಿಜ್ಞಾನ |
| Subject Code / ವಿಷಯ ಸಂಕೇತ | : | 213-NS |
| Maximum Marks / ಗರಿಷ್ಠ ಅಂಕಗಳು | : | 100 |
| Duration of Exam / ಪರೀಕ್ಷೆ ಅವಧಿ | : | 3 hours / 3 ಗಂಟೆಗಳು |
| Time alloted to read the Instructions /<br>ಸೂಚನೆಗಳನ್ನು ಓದಲು ನಿಗಧಿಗೊಳಿಸಿರುವ ಅವಧಿ : | : | 15 minutes / 15 ನಿಮಿಷಗಳು |
| Timings / ಸಮಯ | : | 9:30 AM – 12:45 PM |

### ಅಭ್ಯರ್ಥಿಗೆ ಸಾಮಾನ್ಯ ಸೂಚನೆಗಳು / General Instructions to the Candidate

1. ಅಭ್ಯರ್ಥಿಯು ತನ್ನ ನೋಂದಣಿ ಸಂಖ್ಯೆಯನ್ನು ಪ್ರವೇಶ ಪತ್ರದಲ್ಲಿರುವಂತೆ ಉತ್ತರ ಪತ್ರಿಕೆಯಲ್ಲಿ ನೀಡಿರುವ ಸ್ಥಳದಲ್ಲಿ ಸ್ಪಷ್ಟವಾಗಿ ಬರೆಯತಕ್ಕದ್ದು.

   Candidate should write their register number on the answer booklet as printed in their hall ticket.

2. ಅಭ್ಯರ್ಥಿಯು ಹೆಚ್ಚುವರಿ ಉತ್ತರ ಹಾಳೆಗಳನ್ನು ಪಡೆದಲ್ಲಿ, ಉತ್ತರ ಹಾಳೆಗಳ ಮುಖಪುಟದ ಮೇಲಿನ ನಿಗದಿತ ಸ್ಥಳದಲ್ಲಿ ನೋಂದಣಿ ಸಂಖ್ಯೆ ಬರೆಯತಕ್ಕದ್ದು.

   Candidate should write their register number on the additional answer sheets in the space provided.

3. ಅಭ್ಯರ್ಥಿಯು ನಿಗದಿಪಡಿಸಿದ ಸ್ಥಳವನ್ನು ಹೊರತುಪಡಿಸಿ ಇನ್ನಿತರೇ ಯಾವುದೇ ಪುಟಗಳಲ್ಲಿ ನೊಂದಣಿ ಸಂಖ್ಯೆ, ಗುರುತು, ಚಿಹ್ನೆ ಇನ್ನಿತರೆ ಯಾವುದೇ ಮಾಹಿತಿಗಳನ್ನು ಬರೆಯಬಾರದು. ಒಂದು ವೇಳೆ, ಈ ಬಗೆಯ ಯಾವುದೇ ಮಾಹಿತಿಗಳನ್ನು ಉತ್ತರ ಪತ್ರಿಕೆಯಲ್ಲಿ ಬರೆದ ಪಕ್ಷದಲ್ಲಿ ಅಂತಹ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸುವುದಿಲ್ಲ.

   Candidate should not write register number, mark, sign or any other information in the answer booklet except in the specified place. In case, if found any information in the sheets of the answer scripts, such answer scripts will not be considered for evaluation.

4. ಪರೀಕ್ಷಾ ಸಮಯದಲ್ಲಿ ಅಭ್ಯರ್ಥಿಯು ಪರೀಕ್ಷಾ ಅವ್ಯವಹಾರದಲ್ಲಿ ತೊಡಗಿಸಿಕೊಂಡಿರುವುದು ಕಂಡುಬಂದಲ್ಲಿ ಹಾಗೂ ಪರೀಕ್ಷಾ ಸೂಚನೆಗಳನ್ನು ಉಲ್ಲಂಘಿಸಿದ್ದಲ್ಲಿ ಅಂತಹ ಅಭ್ಯರ್ಥಿಯ ವಿರುದ್ಧ ಪರೀಕ್ಷಾ ನಿಯಮಾನುಸಾರ ಶಿಸ್ತು ಕ್ರಮಕ್ಕೆ ಗುರಿಪಡಿಸಲಾಗುವುದು ಮತ್ತು ಅಂತಹ ಅಭ್ಯರ್ಥಿಯ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.

   Candidate found to be indulged in malpractice during examination and violating examination instructions, action will be taken against such candidate as per the examination rules and his/her answer booklet will not be considered for evaluation.

SEAL

**ಸೂಚನೆಗಳು :** (i) ಬರವಣಿಗೆ ಅಂದವಾಗಿರಲಿ.

(ii) ಉತ್ತರಗಳು ಪ್ರಶ್ನೆಗಳಿಗೆ ಸಮರ್ಪಕವಾಗಿರಲಿ.

(iii) ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(iv) ಪ್ರಶ್ನೆ ಪತ್ರಿಕೆಗಳ ಮೇಲೆ ಉತ್ತರಗಳನ್ನು ಬರೆಯಬಾರದು.

**I. ಕೆಳಗಿನ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ತುಂಬಿ :** **(8 × 1 = 8)**

1) ಇಸ್ಲಾಂ ಧರ್ಮದ ಸಂಸ್ಥಾಪಕ ________ .

2) ಪುನರುಜ್ಜೀವನವು ಮೊದಲು ಪ್ರಾರಂಭವಾದ ದೇಶ ________ .

3) ಬಾಕ್ಸೈಟ್‌ನಿಂದ ಉತ್ಪಾದನೆಯಾಗುವ ಲೋಹ ________ .

4) ಪರಿಶಿಷ್ಟ ಜಾತಿಯವರನ್ನು ಹರಿಜನ ಎಂದು ಕರೆದವರು ________ .

5) ನೇತಾಜಿ ಎಂದು ಹೆಸರಾಗಿದ್ದ ಸ್ವತಂತ್ರ ಹೋರಾಟಗಾರ ________ .

6) ಭಾರತದ ರಾಜ್ಯ ನೀತಿಯ ನಿರ್ದೇಶಾತ್ಮಕ ತತ್ವಗಳಿಗೆ ಆಧಾರವಾಗಿರುವ ದೇಶ ________ .

7) ರಾಜ್ಯ ಪುನರ್ ವಿಂಗಡಣಾ ಕಾಯ್ದೆಯು ಜಾರಿಗೆ ಬಂದ ವರ್ಷ ________ .

8) ಜಾಂಡೀಸ್ ರೋಗವನ್ನು ಉಂಟು ಮಾಡುವ ಮಾಲಿನ್ಯ ________ .

**II. ಕೆಳಗೆ ಕೊಟ್ಟಿರುವ ಮೊದಲ ಜೋಡಿ ಪದಗಳ ಸಂಬಂಧವನ್ನು ಗ್ರಹಿಸಿ, ಎರಡನೆಯ ಜೋಡಿಯಲ್ಲಿ ಬಿಟ್ಟಿರುವ ಪದಗಳನ್ನು ಬರೆಯಿರಿ :** (3 × 1 = 3)

9) ಪ್ರಜಾಪ್ರಭುತ್ವ ಬಣ : ಅಮೇರಿಕ ಸಂಯುಕ್ತ ಸಂಸ್ಥಾನ : : ಸಮಾಜವಾದಿ ಬಣ : ________

10) ರೈಲು ಭೋಗಿ : ಪೆರಂಬೂರು : : ದೊಡ್ಡ ಚಕ್ರ ಮತ್ತು ಆಕ್ಸೆಲ್ : ________

11) ಲಕ್ಷದ್ವೀಪ : ಅರಬ್ಬೀ ಸಮುದ್ರ : : ಅಂಡಮಾನ್ ಮತ್ತು ನಿಕೋಬಾರ್ ದ್ವೀಪ : ________

**III. ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ :** (4 × 1 = 4)

12) ಸ್ವರಾಜ್ ಪಕ್ಷದ ಸ್ಥಾಪನೆ

13) ಖೇಡಾ ಸತ್ಯಾಗ್ರಹ

14) ರೌಲತ್ ಆಕ್ಟ್

15) ಚಂಪಾರನ್ ಸತ್ಯಾಗ್ರಹ

**IV. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ :** (5 × 1 = 5)

16) ಭಾರತದಲ್ಲಿ ಅತೀ ಹೆಚ್ಚು ಭಯೋತ್ಪಾದಕ ದಾಳಿಗೆ ತುತ್ತಾದ ಪ್ರದೇಶ ಯಾವುದು?

17) ದ್ರಾವಿಡ ಭಾಷೆಗಳಲ್ಲಿ ಅತ್ಯಂತ ಹಳೆಯ ಭಾಷೆ ಯಾವುದು?

18) 'ಜೈಹಿಂದ್' ಘೋಷಣೆಯನ್ನು ಕೊಟ್ಟ ಸ್ವಾತಂತ್ರ್ಯ ಹೋರಾಟಗಾರ ಯಾರು?

19) ಸಂವಿಧಾನ ರಚನಾ ಸಭೆಯ ಅಧ್ಯಕ್ಷರು ಯಾರಾಗಿದ್ದರು?

20) ವಿಶ್ವಸಂಸ್ಥೆಯನ್ನು ಏಕೆ ಸ್ಥಾಪಿಸಲಾಯಿತು?

(15 × 2 = 30)

V. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎರಡು ವಾಕ್ಯಗಳಲ್ಲಿ ಉತ್ತರಿಸಿ :

21) ಭಕ್ತಿ ಚಳುವಳಿಯ ಸಂತರನ್ನು ಹೆಸರಿಸಿ.

22) ಸಾಮ್ರಾಜ್ಯಶಾಹಿ ನೀತಿಯು ವಸಾಹತುಗಳ ಮೇಲೆ ಬೀರಿದ ದುಷ್ಪರಿಣಾಮಗಳು ಯಾವುವು?

23) ತಟಸ್ಥ ಚಳುವಳಿಯ ರೂವಾರಿ ದೇಶಗಳನ್ನು ಹೆಸರಿಸಿ.

24) ಭಾರತದ ಗಡಿರಾಷ್ಟ್ರಗಳು ಯಾವುವು?

25) ಕೆಳಗೆ ಕೊಟ್ಟಿರುವ ಖನಿಜಗಳನ್ನು ಲೋಹಗಳು ಹಾಗೂ ಅಲೋಹಗಳಾಗಿ ವಿಂಗಡಿಸಿ ಬರೆಯಿರಿ :

ಕಬ್ಬಿಣ, ವಜ್ರ, ಚಿನ್ನ, ಉಪ್ಪು

26) ಕೃಷಿ ಆಧಾರಿತ ಕೈಗಾರಿಕೆಗಳನ್ನು ತಿಳಿಸಿ.

27) ಭಾರತದ ಉತ್ತರ ಮೈದಾನ ಪ್ರದೇಶವು ಹೆಚ್ಚು ಜನಸಾಂದ್ರತೆಯನ್ನು ಹೊಂದಿದೆ. ಏಕೆ?

28) ಭಾರತದಲ್ಲಿ ಕಂಡುಬರುವ ವಿವಿಧ ನೃತ್ಯ ಪ್ರಕಾರಗಳು ಯಾವುವು?

29) ಜಲಿಯನ್‌ವಾಲಾಬಾಗ್ ಹತ್ಯಾಕಾಂಡವು ಎಲ್ಲಿ ಮತ್ತು ಯಾವಾಗ ನಡೆಯಿತು?

30) ಮಾನವ ಹಕ್ಕುಗಳು ಅತ್ಯವಶ್ಯಕ. ಏಕೆ?

31) ವಿಧಾನ ಪರಿಷತ್ತಿನ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು?

32) ಭಾರತದ ಕೇಂದ್ರ ಶಾಸಕಾಂಗದ ಸದನಗಳನ್ನು ಹೆಸರಿಸಿ.

33) ಭಾರತದಲ್ಲಿರುವ ರಾಜಕೀಯ ಪಕ್ಷಗಳು ಯಾವುವು?

34) ಮಾನವ ನಿರ್ಮಿತ ಪರಿಸರದ ಅಂಶಗಳನ್ನು ತಿಳಿಸಿ.

35) ಭಾರತದ ವಿದೇಶಾಂಗ ನೀತಿಯ ಉದ್ದೇಶಗಳು ಯಾವುವು?

**VI. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಆರು ವಾಕ್ಯಗಳಲ್ಲಿ ಉತ್ತರಿಸಿ :** **(10 × 3 = 30)**

36) ಹರಪ್ಪ ನಾಗರಿಕತೆಯ ಅವನತಿಗೆ ಕಾರಣಗಳನ್ನು ತಿಳಿಸಿ.

37) ಭೌಗೋಳಿಕ ಅನ್ವೇಷಣೆಗಳಿಂದಾದ ಪರಿಣಾಮಗಳು ಯಾವುವು?

38) ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳನ್ನು ಪಟ್ಟಿ ಮಾಡಿ.

39) ಭಾರತದ ವ್ಯವಸಾಯದ ಲಕ್ಷಣಗಳನ್ನು ತಿಳಿಸಿ.

40) ಜಾತಿಯ ಲಕ್ಷಣಗಳಾವುವು?

41) 1857ರ ದಂಗೆಯು ಸೋಲಿನೊಂದಿಗೆ ಅಂತ್ಯವಾಗಲು ಕಾರಣಗಳೇನು?

42) ನಾಗರಿಕ ಅವಿಧೇಯ ಚಳುವಳಿಯನ್ನು ವಿವರಿಸಿ.

[ Turn over

43) ಭಾರತದ ಸಂವಿಧಾನವು ನೀಡಿರುವ ಮೂಲಭೂತ ಹಕ್ಕುಗಳನ್ನು ಪಟ್ಟಿ ಮಾಡಿ.

44) ಗ್ರಾಮ ಪಂಚಾಯಿತಿಯ ಆದಾಯದ ಮೂಲಗಳನ್ನು ತಿಳಿಸಿ.

45) ಭಾರತ ಸರ್ಕಾರವು ಜಾರಿಗೆ ತಂದಿರುವ ಪ್ರಮುಖ ಆರೋಗ್ಯ ಯೋಜನೆಗಳನ್ನು ಹೆಸರಿಸಿ.

**VII. ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ : (4 × 4 = 16)**

46) "ನಮ್ಮ ದೇಶದಲ್ಲಿ ನೀರಾವರಿಯ ಅವಶ್ಯಕತೆ ಇದೆ". ಈ ಹೇಳಿಕೆಯನ್ನು ಸಮರ್ಥಿಸಿ.

47) ಭಾರತದ ಪ್ರಮುಖ ಬಂದರುಗಳನ್ನು ಹೆಸರಿಸಿ.

48) "19 ನೇ ಶತಮಾನದ ಭಾರತದಲ್ಲಿ ಮಹಿಳೆಯರು ತುಳಿತಕ್ಕೆ ಒಳಗಾಗಿದ್ದರು". ಸ್ಪಷ್ಟೀಕರಿಸಿ.

49) ಮೂಲಭೂತ ಕರ್ತವ್ಯಗಳನ್ನು ಪಟ್ಟಿ ಮಾಡಿ.

**VIII. ಭಾರತದ ಅಂದವಾದ ನಕ್ಷೆಯನ್ನು ಬರೆದು ಈ ಕೆಳಗಿನವುಗಳನ್ನು ಗುರುತಿಸಿ : (1 + 3 = 4)**

50) a) ದೆಹಲಿ

b) ಅರಾವಳಿ ಬೆಟ್ಟಗಳು

c) ಕರ್ಕಾಟಕ ಸಂಕ್ರಾಂತಿ ವೃತ್ತ

Do not write on this area